ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಮಂಗಳವಾರ, ದಿನಾಂಕ : 23ನೇ ಜುಲೈ, 2019

ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಬಗ್ಗೆ

ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು):-

486 (708) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ/ಬೋಧಕೇತರರ ಹುದ್ದೆಗಳ ಸಂಖ್ಯೆ ಎಷ್ಟು;

(ಹುದ್ದೆವಾರು ವಿವರ ನೀಡುವುದು) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ; ಮಾಡಿದ್ದರೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವಾಗ ಮತ್ತು ಎಷ್ಟು ಹುದ್ದೆಗಳಿಗೆ ಮತ್ತು ಯಾವ ಯಾವ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಯಿತು; (ಅಧಿಸೂಚನೆಯ ದಿನಾಂಕ, ಅಧಿಸೂಚನೆಯ ಪ್ರತಿ ಒದಗಿಸುವುದು)

(ಆ) ಈ ನೇಮಕಾತಿಯಲ್ಲಿ ಅನುಸರಿಸಲಾದ ಹುದ್ದೆಗಳ ಮೀಸಲಾತಿಯ ಕುರಿತು ವಿವರ ನೀಡುವುದು;

(ಇ) ಸದರಿ ನೇಮಕಾತಿಯ ಕುರಿತು ಯಾವುದಾದರೂ ಆಕ್ಷೇಪಣೆಗಳು ಬಂದಿವೆಯೇ; ಬಂದಿದ್ದರೆ, ಯಾವ ಅಂಶಗಳ ಬಗ್ಗೆ ಬಂದಿದೆ ಮತ್ತು ಆಕ್ಷೇಪಣೆ ಸಲ್ಲಿಸಿದವರ ಮಾಹಿತಿಯನ್ನು ವಿವರದೊಂದಿಗೆ ಒದಗಿಸುವುದು;

(ಈ) ನೇಮಕಾತಿಯಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡಿದೆಯೇ;(ಮಾಡಿದಲ್ಲಿ, ಪತ್ರ ವ್ಯವಹಾರಗಳ ಸಂಪೂರ್ಣ ಮಾಹಿತಿ ನೀಡುವುದು)

(ಉ) ಪ್ರಸ್ತುತ ಎಷ್ಟು ಹುದ್ದೆಗಳ ನೇಮಕಾತಿ ಮಾಡಲಾಗಿದೆ; ಯಾವ ಯಾವ ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ; ನೇಮಕಾತಿ ಮಾಡಲು ಸಂದರ್ಶನ ನಡೆಸಿದ ದಿನಾಂಕ ಯಾವುದು; ಯಾರು ಯಾರು ಸಂದರ್ಶನ ನಡೆಸಿದ್ದಾರೆ; ಯಾವ ಯಾವ ಅಭ್ಯರ್ಥಿಗಳನ್ನು ಯಾವ ಯಾವ ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ; ನೇಮಕಾತಿ ಮಾಡಿ ಆದೇಶ ಪಡೆದ ಅಭ್ಯರ್ಥಿಗಳ ವಿವರಗಳನ್ನು ಹಾಗೂ ಆ ಎಲ್ಲಾ ನೇಮಕಾತಿ ಆದೇಶ ಹೊರಡಿಸಿದ ಪ್ರತಿಯೊಬ್ಬರ ಆದೇಶಗಳ ಪ್ರತಿ ನೀಡುವುದು; ನೇಮಕಾತಿ ಆದೇಶಕ್ಕೆ ಸಹಿ ಮಾಡಿದವರು ಯಾರು ಮತ್ತು ಯಾವ ದಿನಾಂಕದಂದು ನೇಮಕಾತಿ ಆದೇಶಕ್ಕೆ ಸಹಿ ಮಾಡಲಾಗಿದೆ; (ವಿವರ ನೀಡುವುದು) ಬಾಕಿ ಭರ್ತಿ ಮಾಡಬೇಕಾಗಿರುವ ಹುದ್ದೆಗಳು ಎಷ್ಟು ಮತ್ತು ಯಾವುವು; ನೇಮಕಾತಿಯ ಕಾರ್ಯ ಯಾವ ಹಂತದಲ್ಲಿದೆ;

(ಊ) ವಿಶ್ವ ವಿದ್ಯಾಲಯಗಳಲ್ಲಿ ಹುದ್ದೆಗಳ ಭರ್ತಿಗೆ ಅನುಸರಿಸಬೇಕಾದ ರೋಷ್ಟರ್ ನಿಯಮಾವಳಿಗಳೇನು; ಈ ನಿಯಮಗಳ ವಿವರವನ್ನು ಸಂಪೂರ್ಣ ವಿಶ್ಲೇಷಣೆಯೊಂದಿಗೆ ನೀಡುವುದು; (ರೋಷ್ಟರ್ ನಿಯಮಾವಳಿಗಳ ಆದೇಶಗಳು, ಸುತ್ತೋಲೆಗಳು, ನಿಯಮಗಳು ಇವೆಲ್ಲವುಗಳ ಪ್ರತಿಯನ್ನು ನೀಡುವುದು)

(ಋ) ಈ ನೇಮಕಾತಿಯಲ್ಲಿ ರೋಷ್ಟರ್ ನಿಯಮಾವಳಿಗಳನ್ನು ಪಾಲನೆ ಮಾಡಿರುವುದಿಲ್ಲವೆನ್ನುವ ದೂರುಗಳು ಸರ್ಕಾರಕ್ಕೆ ಬಂದಿವೆಯೇ; ಬಂದಿದ್ದಲ್ಲಿ, ದೂರುಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು? (ದೂರುಗಳ ಪಟ್ಟಿ ನೀಡುವುದು)